ಕೊಂಡು ಬಂದಿದ್ದಾರೆ. ಅವರು ಏನೂ ಮಾಡಿಲ್ಲ. ಪಾಟೀಳ್ ನಾಗರಾಜ್ ಅವರು ಹೇಳಿದ್ದನ್ನು ಒಪ್ಪಿ ಕೊಳ್ಳುತ್ತೇನೆ. ಹೈಕೋರ್ಟಿನಿಂದ ತಡೆಯಾಜ್ಞೆ ತೆಗೆದುಕೊಂಡು ೩ ತಿಂಗಳಲ್ಲಿ ಸರಿ ಮಾಡುತ್ತೇವೆಂದು ಹೇಳಿದವರು ಏನೂ ಮಾಡಿಲ್ಲ. ಅದರ ಅರ್ಥ ಇನ್ನೂ ಸುತ್ತ ಮುತ್ತಲಿನ ಬಾವಿಗಳ ನೀರು ಮಾಲಿನ್ಯವಾಗುತ್ತಿದೆ. ಬಹುಶಃ ಅವರು ತೋರಿಸಿದಂತಹ ನೀರು ಕೂಡ ಅದೇ ಬಾವಿಯದು ಇದ್ದರೂ ಇರಬಹುದು, ಇಲ್ಲವೆಂದು ಹೇಳುವುದಿಲ್ಲ.

ಅದನ್ನು ನಾನು ಇಷ್ಟಕ್ಕೆ ತಕರಾರು ಮಾಡುತ್ತಾ ಇಲ್ಲ ವಿವಾದಕ್ಕೆ ಆಸ್ಪದವಿಲ್ಲ, ನಾನು ಒಪ್ಪಿ ಕೊಳ್ಳುತ್ತಿದ್ದೇನೆ ಪ್ರಶ್ನೆ ಏನಾಗಿದೆ ಅಂದರೆ ಹೈಕೋರ್ಟಿನಿಂದ ತಡೆಯಾಜ್ಞೆ ಇದೆ. ಮೂರು ತಿಂಗಳೊಳಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಕಾರ್ಖಾನೆಯವರು ಹೈಕೋರ್ಟಿಗೆ ಏನು ಭರವಸೆ ಕೊಟ್ಟಿದ್ದರು ಆ ಭರವಸೆಯನ್ನು ಅವರು ಈಡೇರಿಸಿಲ್ಲವೆಂದು ಹೈಕೋರ್ಟ್ ಮುಂದೆ ನಾವು ಹೋಗಿ ಸಿದ್ಧಪಡಿಸಬೇಕು. ಅದಕ್ಕೆ ಅಫಿಡವಿಟ್ ಕೊಡಬೇಕೆಂಬ ಮಾತನ್ನು ಪೊಲ್ಯೂಷನ್ ಕಂಟ್ರೋಲ್ ಬೋರ್ಡ್‌ನವರಿಗೆ ನಾನು ಇವತ್ತು ಹೇಳಿದ್ದೇನೆ. ಅವರು ರಿಪೋರ್ಟ್ ತರಿಸಬೇಕು. ಎರಡು ರಿಪೋರ್ಟ್ ಬೇಕಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಒಂದು, ಪಲ್ಯೂಷನ್ ಬೋರ್ಡ್‌ನಲ್ಲೇ ಒಂದು ಲ್ಯಾಬೊರೇಟರಿ ಇದೆ. ಅವರು ಕೂಡ ಸುತ್ತಮುತ್ತಲ ಬಾವಿಗಳಲ್ಲಿ ಯಾವರೀತಿ ನೀರು ಮಾಲಿನ್ಯವಾಗುತ್ತಿದೆ ಎಂಬುದನ್ನು ಪರೀಕ್ಷೆ ಮಾಡಬೇಕು ಇನ್ನೊಂದು ಗೌರ್ನಮೆಂಟ್ ಲ್ಯಾಬೊರೇಟರಿ ಇದೆ. ಅವರೂ ಪರೀಕ್ಷೆ ಮಾಡಿ ರಿಪೋರ್ಟ್ ಕೊಡಬೇಕು. ಈ ಎರಡೂ ರಿಪೋರ್ಟ್ ತರಿಸಿ ಹೈಕೋರ್ಟ್‌ನಲ್ಲಿ ಅಫಿಡವಿಟ್ ಹಾಕಿ ನೋಡಿ ಈ ರೀತಿ ಆಗುತ್ತಿದೆ, ಅದಕ್ಕಾಗಿ ಈ ಒಂದು ಡಿಸ್ಟಿಲರಿ ನಡೆಸದಹಾಗೆ ನೀವು ಆಜ್ಞೆ ಹೊರಡಿಸಬೇಕು ಎಂದು ಅವರು ಕೇಳುವವರಿದ್ದಾರೆ. ಅದು ಒಂದು ವಿಚಾರ ಬಹುಶಃ ಹೈಕೋರ್ಟಿನಿಂದ ಆ ರೀತಿ ನಿರ್ಣಯ ಬಂದರೆ ಅವರು ಫ್ಯಾಕ್ಟರಿ ಮುಚ್ಚಬೇಕಾಗುತ್ತದೆ. ಫ್ಯಾಕ್ಟರಿಯನ್ನು ಮುಚ್ಚಿಸುವಂಥ ಅಧಿಕಾರ ಪಲ್ಯೂಷನ್ ಬೋರ್ಡಿನ ಅಧಿಕಾರಿಗಳಿಗೆ ಇಲ್ಲ. ಲೈಸೆನ್ಸ್ ವಿತಕ್ಕೆ ಕ್ಯಾನ್ಸಲ್ ಮಾಡುವುದಿಲ್ಲ ಎಂದು ಮಾನ್ಯ ಸದಸ್ಯರು ಕೇಳಿದರು. ಇದೇ ಪ್ರಶ್ನೆ ಹೈಕೋರ್ಟ್ ಮುಂದೆ ಇರುವುದರಿಂದ ನಾವೇನಾದರೂ ಲೈಸೆನ್ಸ್ ಕ್ಯಾನ್ಸಲ್ ಮಾಡಿದರೆ ಹೈಕೋರ್ಟ್‌ನಿಂದ ಮತ್ತೊಂದು ತಡೆಯಾಜ್ಞೆ ಬರುತ್ತದೆ. ಆದ್ದರಿಂದ ಇದನ್ನು ಪರಿಶೀಲನೆ ಮಾಡಿಸಂತಿದ್ದೇನೆ. ಹೈಕೋರ್ಟ್ ಮುಂದೆ ಈ ಪ್ರಶ್ನೆ ಇದ್ದಾಗ ನಾವು ಅಫಿಡವಿಟ್ ಮುಂತಾದ್ದು ಹಾಕಿ ನೋಡಿ ನೀವು ಮೂರು ತಿಂಗಳು ಅವಕಾಶ ಕೊಟ್ಟರೂ ಕ್ರಮ ಕೈಗೊಂಡಿಲ್ಲ. ಸುತ್ತಮುತ್ತಲಿನ ಜನರ ಆರೋಗ್ಯದ ಮೇಲೆ ಬಹಳ ಕೆಟ್ಟ ಪರಿಣಾಮವಾಗುತ್ತಿದೆ ಎಂದು ನಾವು ಹೈಕೋರ್ಟ್‌ನವರಿಗೆ ತಿಳಿಸಿ ಹೈಕೋರ್ಟಿನಿಂದ ಈ ಕಾರ್ಖಾನೆ ಮುಂದುವರೆಯಂದಂತೆ ಆಜ್ಞೆ ಹೊರಡಿಸುವುದಕ್ಕೆ ಪ್ರಯತ್ನ ಮಾಡಂತ್ತೇವೆ. ಇದು ಒಂದು ಈ ಪ್ರಯತ್ನದ ಜೊತೆಯಲ್ಲಿ ನಮ್ಮ ಪೊಲ್ಯೂಷನ್ ಕಂಟ್ರೋಲ್ ಬೋರ್ಡ್‌ನಿಂದಲೂ ಕೂಡ ವರದಿ ತರಿಸಿಕೊಂಡು ಸರ್ಕಾರದ ಮಟ್ಟದಲ್ಲಿ ಲೈಸೆನ್ಸ್ ಕ್ಯಾನ್ಸಲ್ ಮಾಡಲಿಕ್ಕೆ ಸಾಧ್ಯವೇ ಎಂಬುದನ್ನು ಪರಿಶೀಲನೆ ಮಾಡಬೇಕಾಗುತ್ತದೆ ಆದರೆ ಒಂದು ವಿಚಾರ ನಾವು ಗಮನದಲ್ಲಿಟ್ಟುಕೊಳ್ಳಬೇಕು. ಇದೊಂದೇ ಡಿಸ್ಟಿಲರಿಯಲ್ಲಿ ಈ ಪರಿಸ್ಥಿತಿ ಇದೆಯೆಂದು ಅಲ್ಲ ಬಹುಶಃ ಅನೇಕ ಡಿಸ್ಟಿಲರಿಗಳಲ್ಲಿ ಇದೇ ಪರಿಸ್ಥಿತಿ ಇದೆ. ಅವರು ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಮಾಡುವುದಿಲ್ಲ. ಮಾಡಿದರೂ ಅರ್ಧಂಬರ್ಧ ಮಾಡುತ್ತಾರೆ. ಇದರಿಂದ ಅವರಿಗೂ ಲಾಭ ಇಲ್ಲ, ಸುತ್ತಮುತ್ತಲ ಜನರಿಗೂ ಲಾಭ ಇಲ್ಲ ಸರಿಯಾಗಿ ಪರ್‌ಫೆಕ್ಟಾಗಿ ಮಾಡಬೇಕೆಂದರೆ ಬಹಳ ದುಡ್ಡು ಖರ್ಚಾಗುತ್ತದೆ, ಅಷ್ಟು ದುಡ್ಡು ಖರ್ಚು ಮಾಡಿದರೆ ಈ ಫ್ಯಾಕ್ಟರಿ ನಡೆಸುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಇದನ್ನು ಪೂರ್ತಿಯಾಗಿ ವಿಚಾರ ಮಾಡಿ ಒಂದು ಕ್ರಮ ಕೈಗೊಳ್ಳಬೇಕಾಗಿದೆ ಈ ವಿಚಾರದಲ್ಲಿ ಹೈಕೋರ್ಟಿನಲ್ಲಿ ಹೋಗಿ ನಾವು ಪ್ರಯತ್ನ ಮಾಡುತ್ತೇವೆ. ಬಹುಶಃ: ಹೈಕೋರ್ಟಿನಲ್ಲಿ ನಮಗೆ ಯಶಸ್ಸು ಸಿಗಬಹುದೆಂದು ಭಾವನೆ ಮಾಡಿದ್ದೇವೆ. ಒಂದುವೇಳೆ ಅಲ್ಲಿ ಸಿಗದೇ ಹೋದರೆ ಎರಡನೇ ಹಾದಿಯಿಂದ ಈ ಪಲ್ಯೂಷನ್ ನಾವ ರೀತಿ ಕಂಟ್ರೋಲ್ ಮಾಡಲಿಕ್ಕೆ ಸಾಧ್ಯವೋ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ii) ಸೇಂದಿ ಮಾರಾಟ ನಿರ್ಬಂಧವ ಕುರಿತಾದ ಸರ್ಕಾರದ ಘೋಷಣೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರ್ತೆದಾರರಿಗೆ ಉಂಟಾಗಿರುವ ತೊಂದರೆ.

ಶ್ರೀ ಬಸವರಾಜ್ (ಬ್ರಹ್ಮಾವರ) —ಮಾನ್ಯ ಅಧ್ಯಕ್ಷರೆ, ಸೇಂದಿ ಮಾರಾಟ ನಿರ್ಬಂಧವ ಕುರಿತಾದ ಸರ್ಕಾರದ ಘೋಷಣೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರ್ತೆದಾರರಿಗೆ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ಗಣಕಾಸು ಹಾಗೂ ಅಬ್ಕಾರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ (ಆರ್ಥಿಕ ಮತ್ತು ಅಬ್ಕಾರಿ ಮಂತ್ರಿಗಳು). —ಮಾನ್ಯ ಅಧ್ಯಕ್ಷರೆ, ಈ ಕಿಳಕಂಡ ಹೇಳಿಕೆಯನ್ನು ಈ ಬಗ್ಗೆ ನೀಡಬಯಸುತ್ತೇನೆ.

ಶೇಂದಿ ಉತ್ತಾರುದಾರರ ಪುನರ್ವಸತಿಯ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲು ಶಿಫಾರಸ್ಸು ಮಾಡಲು ಆರ್ಥಿಕ ಮಂತ್ರಿಗಳ, ಆರೋಗ್ಯ ಮಂತ್ರಿಗಳ ಮತ್ತು ಕಾನೂನು ಮಂತ್ರಿಗಳನ್ನು ಒಳಗೊಂಡ ಒಂದು ಸಚಿವ ಸಂಪುಟದ ಸಮಿತಿಯನ್ನು ರಚಿಸಲಾಗಿದೆ.

ಸದರಿ ಸಮಿತಿಯು ದಕ್ಷಿಣ ಕನ್ನಡ ಜಿಲ್ಲೆಯ ಶೇಂದಿ ಉತ್ತಾರುದಾರರ ಪುನರ್‌ವಸತಿಯ ಬಗೆಗಿನ ಪ್ರಸ್ತಾವನೆಯನ್ನು ಚರ್ಚಿಸಲು ದಿನಾಂಕ ೧೧-೬-೯೦ ಮತ್ತು ೧೫-೬-೯೦ ರಂದು ಸಭೆ ಸೇರಿತ್ತು. ಚರ್ಚೆಯು ಮುಂದುವರಿದಿದ್ದು ದಿನಾಂಕ ೨೦-೬-೯೦ರ ನಂತರ ಪುನ: ಸಭೆ ಸೇರಲಿದೆ.

ಅನೌಪಚಾರಿಕವಾಗಿ ಎರಡು ಬಾರಿ ನಡೆದ ಚರ್ಚೆಯಲ್ಲಿ ಲೋಕಸಭಾ ಸದಸ್ಯರಾದ ಮತ್ತು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಆಸ್ಕರ್ ಫರ್ನಾಂಡಿಸ್ ಮತ್ತು ಇತರೆ ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರು ಭಾಗವಹಿಸಿದ್ದರು.

ಶೀಘ್ರದಲ್ಲೆ ನಿರೀಕ್ಷಿಸಿರುವ ಸದರಿ ಸಚಿವ ಸಂಪುಟದ ಉಪ ಸಮಿತಿಯು ಶಿಫಾರಸ್ಸುಗಳನ್ನು ಗಮನದಲ್ಲಿರಿಸಿಕೊಂಡು ಶೇಂದಿ ಉತ್ತಾರುದಾರರ ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರವು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ.

† ಶ್ರೀ ಬಸವರಾಜ್.—ಸನ್ಮಾನ್ಯ ಅಧ್ಯಕ್ಷಿಣಿಯವರೆ, ನಮ್ಮ ರಾಜ್ಯದಲ್ಲಿ ಪೂರ್ಣ ನಿಷೇಧ ಜಾರಿಯಲ್ಲಿ ಇಲ್ಲ. ಅಂದರೆ ಜನರು ಕುಡಿಯಬಹುದು. ನಮ್ಮ ಸರ್ಕಾರ ಈ ಶೇಂದಿ ನಿಷೇಧ ಮಾಡಿದೆ. ಇದರಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಒಂದು ಜನಾಂಗದ ಕಾಲಕಸುಬು ಏನಿದೆ, ಮರದಿಂದ ಕಳ್ಳನ್ನು ತೆಗೆಯುವಂಥದ್ದು ಆ ಕೆಲಸಕ್ಕೆ ಮೂಲಭೂತವಾಗಿ ತಡೆಮಾಡಿದಂತಾಗಿದೆ. ಇದರಿಂದಾಗಿ ನೇರವಾಗಿ ಸುಮಾರು ೧೫ ಸಾವಿರ ಕುಟುಂಬಗಳಿಗೆ ಕೆಲಸ ಇಲ್ಲದೆ ಅವರು ಬೀದಿ ಪಾಲಾಗುವಂಥ ಪರಿಸ್ಥಿತಿ ಉದ್ಭವವಾಗಿದೆ.

೧೧-೦೦ ಎ.ಎಂ.

ಇಲ್ಲಿ ನಮ್ಮ ಸರ್ಕಾರ ಏನು ಹೇಳಿದೆ ಎಂದರೆ ಕಲಬೆರಕೆಯಾಗಿರುವ ಕಳ್ಳನ್ನು ಅಥವಾ ಶೇಂದಿಯನ್ನು ನಿಷೇಧ ಮಾಡಿದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಂದಿ ತಯಾರು ಏನ್ನುವುದೇ ಇಲ್ಲ. ಅದು ನ್ಯಾಚುರಲ್ ಪ್ರೊಡಕ್ಷನ್ ಅಂದರೆ ಮರದಿಂದ ಇಳಿಸುವ ಉತ್ತಮವಾದ ಕಳ್ಳು. ಇದು ಹಳ್ಳಿಯ ಜನರು ಉಪಯೋಗಿಸಿಕೊಂಡು ಬಂದಂತಹ ಕಳ್ಳು. ಈ ಶೇಂದಿಗೂ ಹಾಗೂ ನಮ್ಮ ಭಾಗದಲ್ಲಿ ತೆಗೆಯುವಂತಹ ಕಳ್ಳಿಗೂ ಅರ್ಧ ವ್ಯತ್ಯಾಸ ಇದೆ. ಶೇಂದಿಯನ್ನು ತಯಾರಿಸಲಾಗುತ್ತದೆ. ಆದರೆ ಕಳ್ಳನ್ನು ತಯಾರಿಸುವುದಕ್ಕಾಗುವುದಿಲ್ಲ. ಇದು ಮರದಿಂದ ಇಳಿಸುವಂತಹದ್ದು. ಮರದಿಂದ ಇಳಿಸುವ ಕೆಲಸವನ್ನು ದಕ್ಷಿಣ ಕನ್ನಡ ಜಿಲ್ಲೆಯ ಮೂರನೇ ಒಂದು ಭಾಗದಷ್ಟು ಇರುವ ಜನಾಂಗ ಮಾಡುತ್ತಾ ಇದೆ. ಆ ಒಂದು ಜನಾಂಗ ಇದನ್ನು ಶತಮಾನಗಳಿಂದ ನಡೆಸಿಕೊಂಡು ಬಂದಿದ್ದಾರೆ. ಅವರನ್ನು ಇಂದು ನಿರ್ಗತಿಕರನ್ನಾಗಿ ಮಾಡುವ ಪರಿಸ್ಥಿತಿಗೆ ನಮ್ಮ ಸರ್ಕಾರ ಮಾಡಿದೆ ಎಂದು ಹೇಳಲಿಕ್ಕೆ ಬಹಳ ವಿಷಾದವಾಗುತ್ತದೆ. ಅದಕ್ಕಾಗಿ ನಾನು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯ ಮಾಡುವುದೇನೆಂದರೆ, ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಈ ಶೇಂದಿ ನಿಷೇಧವನ್ನು ಜಾರಿಗೆ ತರಬಾರದು. ಅವರು ಇದನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗಬಹುದೆಂದು ಹಿಂದಿನ ಸರ್ಕಾರಗಳು ಮಾಡಿದ ಉದಾಹರಣೆಗಳು ಉಂಟು. ಏಕೆಂದರೆ, ೧೯ ಜಿಲ್ಲೆಗಳಲ್ಲಿ ಈ ಶೇಂದಿ ಆಕ್ಷನ್ ಏನು ಇದೆ, ಅದನ್ನು ಕಳೆದ ಭಾರಿ ೭ ಜಿಲ್ಲೆಗಳಿಗೆ ಮಾತ್ರ ಅನ್ವಯಿಸಿ ಮಾಡಿ, ಉಳಿದ ಜಿಲ್ಲೆಗಳಿಗೆ ಇದನ್ನು ಜಾರಿಗೊಳಿಸಲಿಲ್ಲ. ಅದರಲ್ಲೂ ಎಲ್ಲಿ ಕಲಬೆರಕೆಯ ಶೇಂದಿ ತಯಾರಾಗುತ್ತದೆ, ಅಂತಹ ಜಿಲ್ಲೆಗಳಲ್ಲಿ ಮಾತ್ರ ಇದನ್ನು ಜಾರಿಗೊಳಿಸಬೇಕಾಗಿದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಉತ್ತಮವಾದ ಶೇಂದಿಯನ್ನು ಮರದಿಂದ ಅಂದರೆ ತೆಂಗಿನ ಮರದಿಂದ ಹಾಗೂ ತಾಳೆಯ ಮರದಿಂದ ತೆಗೆಯಲಿಕ್ಕೆ ಅವಕಾಶ ಕೊಡಬೇಕು. ದಕ್ಷಿಣ ಕನ್ನಡ ಜಿಲ್ಲೆಯ ಸಾಮಾನ್ಯ ಜನವರ್ಗದವರು, ಎಲ್ಲರೂ ಇದನ್ನು ಒಂದು ಪಾನೀಯವನ್ನಾಗಿ ಸ್ವೀಕರಿಸುತ್ತಾರೆ. ಈ ಪಾನೀಯವನ್ನು ನಿರ್ಬಂಧ ಮಾಡಿದರೆ, ಅವರು ಬೇರೆ ಎಲ್ಲಿಗೆ ಹೋಗಬೇಕು ? ಹೆಚ್ಚಿನ ರೇಟಿನ ಅಥವಾ ದೇಹಕ್ಕೆ ಅನಾರೋಗ್ಯಕರವಾದ, ಆರಾಕ್, ಶರಾಬು ಅಥವಾ ಪೆನ್ನಿಗೆ ಅವರು ಮೊರೆ ಹೋಗಬೇಕಾದ ಪರಿಸ್ಥಿತಿಗೆ ನಮ್ಮ ಸರ್ಕಾರ ಅವಕಾಶ ಮಾಡಿಕೊಡಬಾರದು. ಮತ್ತು ಸಾಮಾಜಿಕ ಪರಿಸ್ಥಿತಿ ಏನು ಇದೆ ಎಂದರೆ ಹಳ್ಳಿಯಲ್ಲಿ ಶ್ರೀಮಂತ ಕುಟುಂಬದಿಂದ ಬಂದವರು ಅಥವಾ ಬೆಸ್ತ ಜನಾಂಗದವರು ಕೆಲಸ ಮಾಡಿ ಮನೆಗೆ ಬಂದ ನಂತರ ಎಲ್ಲರೂ ಒಟ್ಟಾಗಿ ಕುಳಿತು ಕಳ್ಳು ಕುಡಿಯುವಂತಹ ಪರಿಪಾಠವನ್ನು ಮೊದಲಿನಿಂದಲೂ ನಡೆಸಿಕೊಂಡು ಬಂದಿದ್ದಾರೆ. ಅಂತಹ ಒಂದು ಪರಿಸ್ಥಿತಿಯನ್ನು ನಮ್ಮ ಸರ್ಕಾರ ಈ ಶೇಂದಿ ನಿಷೇಧದಿಂದ ಆ ಜನರ ಜೀವನ ಅಲ್ಲೋಲಕಲ್ಲೋಲ ಮಾಡುವ ಪರಿಸ್ಥಿತಿಗೆ ತಂದೊಡ್ಡಿದೆ.

ಅದು ಹಾಗೆ ಆಗಬಾರದು. ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನರು ಇದರ ಬಗ್ಗೆ ಪ್ರತಿಭಟನೆ ಯನ್ನು ಪ್ರಾರಂಭ ಮಾಡಿದ್ದಾರೆ- ನಮ್ಮ ನಾಯಕರು ಯಾವುದೇ ಹೇಳಿಕೆಯನ್ನು ಕೊಟ್ಟರೂ ಕೂಡ ಆ ಜನರು ಅದಕ್ಕೆ ಪ್ರತಿಸ್ಪಂದಿಸುತ್ತಿಲ್ಲ. ಜನಾಂದೋಳನವನ್ನು ತಯಾರು ಮಾಡಿದ್ದಾರೆ ಇವತ್ತು ಆ ಬಗ್ಗೆ ಪ್ರತಿಭಟನಾ ಸಭೆ ಕೂಡ ಜರುಗುತ್ತಾ ಇದೆ. ಅದುದರಿಂದ ಇದರ ಬಗ್ಗೆ ಸೂಕ್ತ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥಿಸಿ ಕೊಳ್ಳುತ್ತೇನೆ.

೧೧–೦೦ ಪಿ.ಎಂ.

† ಶ್ರೀ ಎಂ. ಬ್ಲೇಸಿಯಸ್ ಡಿಸೋಜ (ಮಂಗಳೂರು ಕ್ಷೇತ್ರ).—ಮಾನ್ಯ ಅಧ್ಯಕ್ಷರೆ, ಈ ಸೇಂದಿ ನಿಷೇಧದ ಬಗ್ಗೆ ೩ ತಿಂಗಳ ಹಿಂದೆ ಇದೇ ಸದನದಲ್ಲಿ ರಾಜ್ಯಪಾಲರು ತಮ್ಮ ಭಾಷಣ ಮಾಡುವಾಗ ಇಡೀ ಕರ್ನಾಟಕದಲ್ಲಿ ಸೇಂದಿ ಮಾರಾಟವನ್ನು ನಿಷೇಧ ಮಾಡುತ್ತೇವೆಂದು ಹೇಳಿದರು. ಆದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ ವಿಷಯವನ್ನು ಪರಿಶೀಲನೆ ಮಾಡುತ್ತೇವೆಂದು ಅವರು ಚರ್ಚೆಗೆ ಉತ್ತರ ಕೊಡುವಷ್ಟರಲ್ಲಿ ನಮಗೆ ಹೇಳಿದರು. ಮಂಗಳೂರು, ಅಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಕನಟ್ ಟ್ರೀಸ್ ಹಾಗೂ ಫಾಕ್ಟ್ರೀಸ್‌ನಿಂದ ತೆಗೆಯುವ ಸೇಂದಿಯೇ ವಿನಃ ಅಲ್ಲಿ ಬೇರೆ ರೀತಿಯಲ್ಲಿ ಮಾಡುತ್ತಿಲ್ಲ. ಬೇರೆ ಕಡೆಯಲ್ಲಿ ಮಾಡುವ ಹಾಗೆ ಕ್ಲೋರಲ್ ಹೈಡ್ರೇಟಿನಿಂದ ಸೇಂದಿಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡುವುದಿಲ್ಲ. ಇದರ ಬಗ್ಗೆ ನಮಗೆ ಅಬ್ಕಾರಿ ಸಚಿವರಿಂದ ಇಪ್ಪತ್ತರವರೆಗೆ ಸೂಕ್ತವಾದ ಉತ್ತರ ಬರಲಿಲ್ಲ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ಕಡೆಗಳಲ್ಲೂ ಪ್ರತಿಭಟನೆ ಶುರುವಾಗಿದೆ. ಇವತ್ತು ಅವರು ನೊಡ್ಕ ಜಾಥಾ ತೆಗೆದುಕೊಂಡು ಡಿ.ಸಿ. ಆಫೀಸಿಗೆ ಹೋಗುತ್ತಾರೆ. ಅವರ ಉದ್ದೇಶವೇನೆಂದರೆ, ಈ ಸೇಂದಿ ಕುಡಿಯಬಹುದು, ಈ ಸೇಂದಿ ಜೀವಕ್ಕೆ ಹಾನಿಯಲ್ಲ. ಇದು ಅಮಲು ಪದಾರ್ಥ ಅಲ್ಲವೆಂದು ತಿಳಿಸುವುದಾಗಿದೆ. ಇದು ಬರೇ ಶೇಕಡ ಳಿರಷ್ಟು ಆಲ್ಕೋಹಾಲ್ ಇರುವ ಒಂದು ಪಾನೀಯ ಎಂದು ಹೇಳಬಹುದು. ನಮ್ಮ ಜಿಲ್ಲೆಯಲ್ಲಿ ಜನರು ಮುಖ್ಯವಾಗಿ ಕೂಲಿ ಮಾಡುವವರು ಸಾಯಂಕಾಲ ಒಂದೆರಡು ಬಾಟಲು ಸೇಂದಿ ಪತ್ತು ಮೀನನ್ನು ತಿಂದು ಮಲಗಿಕೊಳ್ಳುತ್ತಾರೆ, ಇದು ಒಳ್ಳೆಯ ಆಹಾರ ವೆಂದು ಸೇವಿಸಿ ಆ ಜನರು ಜೀವನ ಮಾಡುತ್ತಿದ್ದಾರೆ. ಇದಕ್ಕಾಗಿ ನಾನು ನಮ್ಮ ಮಂತ್ರಿಗಳಿಗೆ ಹೇಳುವುದೇನೆಂದರೆ, ಜುಲೈ ಒಂದರಿಂದ ಈ ಕಾಯಿದೆ ಜಾರಿಗೆ ಬರುತ್ತದೆ ಈ ಬಗ್ಗೆ ಇಪ್ಪತ್ತರವರೆಗೆ ನಮಗೆ ಯಾವುದೂ ಉತ್ತರ ಸಿಗಲಿಲ್ಲ. ನಮ್ಮ ಮಾನ್ಯ ಮಂತ್ರಿಗಳು ೭೦ನೇ ತಾರೀಖಿನ ನಂತರ ಹೇಳಿದ್ದಾರೆ. ಇವತ್ತು ನಾವು ೨೨ನೇ ತಾರೀಖಿನಲ್ಲಿದ್ದೇವೆ. ದಯವಿಮಾಡಿ. ತಾವು ನಮಗೆ ಸೂಕ್ತ ಪರಿಹಾರ ಕೊಡಬೇಕು. ಸುಮಾರು ೨೦ ಸಾವಿರ ಟ್ಯಾಪ್ಪರ್ಸ್ ಕುಟುಂಬಿಗಳು ಇದರಲ್ಲಿ ಕೆಲಸ ಮಾಡು ತ್ತಿವೆ. ೬೦೭ ಅಂಗಡಿಗಳು ಇವೆ. ಈ ೬೦೭ ಅಂಗಡಿಗಳಿಗೆ ಕನಿಷ್ಟ ಪಕ್ಷ ೫೫ ಟ್ಯಾಪ್ಪರ್ಸ್‌ನವರು ಸೇಂದಿ ಸಪ್ಲೈ ಮಾಡುವುದಾದರೆ ಸುಮಾರು ೧೦ ಸಾವಿರ ಹಳ್ಳಿ ಜನರು, ಹಾಗೆಯೇ ಅಂಗಡಿಯಲ್ಲಿ ಕೆಲಸ ಮಾಡುವ ಜನರು ಮತ್ತು ಬೇರೆ ಬೇರೆ ಉದ್ಯೋಗದಲ್ಲಿರುವ ಸುಮಾರು ೨೦ ಸಾವಿರ ಜನರು ಈ ಕೆಲಸ ದಲ್ಲಿದ್ದಾರೆ. ಇದು ನಮ್ಮ ದೇಹಕ್ಕೆ ಹಾನಿಯಾಗದ ಪಾನೀಯವಾಗಿದೆ. ಪ್ರೊಹಿಬಿಷನ್ ತರುವು ದಾದರೆ ಮೊದಲು ಶಾಖೆಗೆ ತರಬೇಕು ಈ ಅಬಕಾರಿ ಬಹಳಷ್ಟು ಡೇಂಜರಸ್ ಆಗಿದೆ. ಈ ಅಬಕಾರಿ ನಿಂದ ಬಹಳಷ್ಟು ಜನರು ಸತ್ತು ಹೋಗುತ್ತಾರೆ. ನಾವು ಹೆಲ್ತ್ ಫಾರ್ ಆಲ್, ಬೈ ೨೦೦೦ ಎ.ಡಿ. ಯೆಂದು ಹೇಳುತ್ತೇವೆ. ಇಂತಹ ಸಂದರ್ಭದಲ್ಲಿ ಈ ಕರಾಬ್ ಅನ್ನು ಎನ್‌ಕ್ರೈಜ್ ಮಾಡುವುದು ತಪ್ಪು. ಅದನ್ನು ಬೇಕಾದರೆ ಕ್ಲೋಸ್ ಮಾಡಿ. ಕ್ಲೋರಲ್ ಹೈಡ್ರೇಟ್‌ನಲ್ಲಿ ತಯಾರು ಮಾಡುವ ಸೇಂದಿಯನ್ನು ಕ್ಲೋಸ್ ಮಾಡಿ. ಆದರೆ ನಿಜವಾಗಿ ತೆಂಗಿನ ಮರ ಮತ್ತು ತಾಳೆ ಮರದಿಂದ ತೆಗೆಯುವ ಶೇಂದಿಯನ್ನ ಜನರು ಕುಡಿಯುವ ಹಾಗೆ ಇಲ್ಲಲ್ಲಿ ಕೋ-ಆಪರೇಟಿವ್ ಸೊಸೈಟಿಗಳ ಮುಖಾಂತರ ಮಾರಾಟ ಮಾಡಿ ಎಂದು ನಾನು ಕೇಳಿಕೊಳ್ಳುತ್ತೇನೆ. ನಾನು ಮಾನ್ಯ ಮಂತ್ರಿಗಳಿಗೆ ಹೇಳುವುದೇನೆಂದರೆ, ಇದನ್ನು ಆಕ್ಷನ್ ಮಾಡುವುದು ಬೇಡ. ಆಕ್ಷನ್ ಮಾಡಿದರೆ ಅಲ್ಲಿ ಕಲುಬಿರಕೆಯಾಗುವ ಸಂಭವ ಜಾಸ್ತಿ. ಇದನ್ನು ಟ್ಯಾಪ್ಪರ್ಸ್‌ನವರೆ ತೆಗೆದು ಸಹಕಾರ ಸಂಘಗಳ ಮುಖಾಂತರ ಮಾರಾಟ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಉಪಾಧ್ಯಕ್ಷರೆ, ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇಂದಿ ತೆಗೆಯಬಹುದು ಮಾರಾಟ ಮಾಡಲಕ್ಕಿಲ್ಲ ಎನ್ನುವಂಥ ಒಂದು ಸ್ಥಿತಿಯಿಂದಾಗಿ ಶತಮಾನಗಳಿಂದ ಈ ಉದ್ಯೋಗವನ್ನು ನಂಬಿಕೊಂಡು ಬಂದಂಥ, ಆಹಾರವಾಗಿ ತೆಗೆದುಕೊಳ್ಳತಕ್ಕಂಥ ಲಕ್ಷಾಂತರ ಜನರಿಗೆ ಒಂದು ರೀತಿಯ ಕ್ಷೋಭೆ ಉಂಟಾಗಿದೆ. ಅದರ ಬಗ್ಗೆ ಪ್ರತಿಭಟನೆ, ಮೆರವಣಿಗೆ,

ಸಭೆ ಎಲ್ಲ ನಡೆಯುತ್ತಿದೆ. ಜಿಲ್ಲೆಯ ಎಲ್ಲಾ ಶಾಸಕರು ನಾವೂ ಸೇರಿ ಸರ್ಕಾರದ ಗಮನವನ್ನು ಈಗಾಗಲೇ ಸೆಳೆದಿದ್ದೇವೆ. ನಮ್ಮ ಪಾರ್ಲಿಮೆಂಟ್ ಸದಸ್ಯರು ಹೇಳಿದ್ದಾರೆ. ಆದರೂ ಈ ಕುರಿತು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಬಹಳ ವಿಳಂಬವಾಗುತ್ತಿದೆ ಎಂದು ನನಗೆ ಆನ್ನಿಸುತ್ತಿದೆ. ಆತ್ಯಂತ ವಿನಯ ಪೂರ್ವಕವಾಗಿ ನಾನು ಸರ್ಕಾರದ ಪತ್ತಿರ ಹೇಳುತ್ತಿದ್ದೇನೆ. ಸಚಿವ ಸಂಪುಟದ ಉಪ ಸಮಿತಿಯಾದರೂ ಕೂಡ ಈ ಕುರಿತಾದ ನಿರ್ಧಾರ ಬಹಳ ವಿಳಂಬವಾಗುತ್ತಿದೆ. ಇದು ಜಿಲ್ಲೆಯ ಸಹಸ್ರಾರು ಜನರ ಜೀವನಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ತ್ವರ್ತ ನಿರ್ಧಾರ ತೆಗೆದುಕೊಳ್ಳಬೇಕಾದಂಥ ವಿಚಾರ. ಈ ವಿಚಾರದಲ್ಲಿ ಈ ಸಭೆ ಏಳಿ ಹೊಟ್ಟೆಯೊಳಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು ಎಂದು ನನಗನ್ನಿಸಂತ್ತದೆ. ಈ ಬಗ್ಗೆ ಸರ್ಕಾರ ಒಂದು ಮುಖ್ಯವಾದ ನಿರ್ಧಾರವನ್ನು ತೆಗೆದುಕೊಳ್ಳುವಾಗ ಮಾನ್ಯ ಸಚಿವರು ಆ ಜಿಲ್ಲೆಗೆ ಹೋಗಿ ನೋಡಿದರೆ ಪರಿಸ್ಥಿತಿ ಅರ್ಥವಾಗುತ್ತದೆ. ಅಲ್ಲಿನ ವಿಚಾರ ಜಿಲ್ಲೆಯ ಪತ್ರಿಕೆಗಳಲ್ಲಿ ಬಂದಿದೆ. ಬಿಂಕಿ ಹಚ್ಚಿದಂಥ ಒಂದು ಪ್ರಸಂಗ ಕೂಡ ನಡೆದಿದೆ. ಇದು ಯಾವು ಯಾವುದೋ ರೀತಿಯಲ್ಲಿ ರಾಜಕೀಯವಾಗಿ ಮತ್ತೊಂದು ರೀತಿಯಾಗಿ ಪರಿವರ್ತನೆಯಾಗುತ್ತಿದೆ. ನಮ್ಮ ಜಿಲ್ಲೆಯ ಶಾಸಕರಿಗೆ ಪಾರ್ಲಿಮೆಂಟ್ ಸದಸ್ಯರಿಗೆ ಅತ್ಯಂತ ಅಸಹನೀಯವಾದ ಒಂದು ಪರಿಸ್ಥಿತಿ ಒದಗಿ ಬಂದಿದೆ. ಇದಕ್ಕಾಗಿ ಕೂಡಲೇ ಕ್ರಮವನ್ನು ಕೈಗೊಳ್ಳಬೇಕು. ಇದರ ಕುರಿತಾಗಿ ಶ್ರೀಮಾನ್ ಬ್ಲೇಸಿಯಸ್ ಡಿಸೋಜರವರು ಹಾಗೂ ಬಸವರಾಜರವರು ಸಲಹೆ ಕೊಟ್ಟಾಗೆ ಸೂಕ್ತ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೆ, ಇವತ್ತು ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರುಗಳಿಗೆ ಒಂದು ರೀತಿಯ ಅಸಹನೀಯವಾದ ಪರಿಸ್ಥಿತಿ ಒದಗಿದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ವಿತಕ್ಕೇದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಮೂರ್ತೆದಾರರಂ ಎಂದು ಹೇಳತಕ್ಕ ಜನಾಂಗದವರು ಶತಮಾನದಿಂದ ಕೆಲಸವನ್ನು ಮಾಡಿಕೊಂಡು ಬರುತ್ತಾ ಇದ್ದಾರೆ, ಇವತ್ತು ಸರ್ಕಾರದ ಈ ನೀತಿಯಿಂದ ಅವರು ಬೀದಿಪಾಲಾಗಬೇಕಾದ ಪರಿಸ್ಥಿತಿ ಬಂದಿದೆ. ಅವರೆಲ್ಲ ಬಡವರು. ಆದರಿಂದಲೇ ಜೀವನ ಮಾಡುವವರು ದಿವಸಕ್ಕೆ ಮೂರು ಸಲ ಮರ ಹತ್ತಿ, ಮೂರ್ತೆ ಮಾಡಿ ಆದರಿಂದಲೇ ಜೀವನ ಮಾಡತಕ್ಕ ಈ ಜನ ಇವತ್ತು ದಿಕ್ಕುಗಾಣದೆ ಇದ್ದಾರೆ. ಆದುದರಿಂದ ಸನ್ಮಾನ್ಯ ಮಂತ್ರಿಗಳು ಈಗ ಆದಷ್ಟು ಬೇಗ ಉಪಸಮಿತಿ ಮಾಡಿ ತೀರ್ಮಾನ ಮಾಡತಕ್ಕ ವಿಷಯ ಹೇಳಿದ್ದಾರೆ. ಇದನ್ನು ಆದಷ್ಟು ಅವಸರವಾಗಿ ಮಾಡಬೇಕು. ಅಲ್ಲಿಯ ಪರಿಸ್ಥಿತಿ ಯಾವುದಿದೆ ಎಂಬುದು ಮಾನ್ಯ ಮಂತ್ರಿಗಳು ಅಲ್ಲಿಗೆ ಹೋದರೆ ಗೊತ್ತಾಗುತ್ತದೆ ಅಲ್ಲಿ ಪ್ರತಿದಿನ ಸಭೆಗಳು, ಮೈದಾನದಲ್ಲಿ ಸಭೆಗಳು, ಜಾಥಾಗಳು ಬೇರ ಬೇರೆ ರೀತಿಯ ಪ್ರಕಟಣೆ ಪತ್ರಿಕೆಗಳಲ್ಲಿ ಬರುವುದನ್ನು ನೋಡಿದರೆ ಇದು ಒಂದು ರಾಜಕೀಯ ರೂಪಕ್ಕೆ ತಿರಿಗಿಕೊಂಡು ನಾನಾ ರೂಪದಲ್ಲಿ ಆಗುತ್ತಿದೆ. ಇವತ್ತು ಅಲ್ಲಿ ಮೂರ್ತೆದಾರರಿಗೆ ನ್ಯಾಯ ಒದಗಿಸಬೇಕು. ಇವತ್ತು ಶೇಂದಿ ಮಾರಾಟಕ್ಕೆ ಸರ್ಕಾರ ಸಹಕಾರ ಸಂಘಗಳ ಮೂಲಕ ಮಾರುವುದಕ್ಕೆ ವ್ಯವಸ್ಥೆ ಮಾಡಿದರೆ ಎಲ್ಲವೂ ಸಮ ಆಗುತ್ತದೆ. ಜುಲೈ ಒಂದನೇ ತಾರೀಖಿನಿಂದ ಈ ಕಾನೂನು ಜಾರಿಗೆ ಬರುತ್ತದೆ, ಎಂದರೆ ಇನ್ನು ೮ ದಿವಸ ಮಾತ್ರ ಇದೆ. ಇವತ್ತು ೨೨ನೇ ತಾರೀಖು ಇಡೀ ಜಿಲ್ಲೆಯ ಎಲ್ಲಾ ಜನರೂ ಒಂದಾಗಿ ದೊಡ್ಡ ಜಾಥಾ ತೆಗೆದು ಬಹಳ ದೊಡ್ಡ ಸಭೆ ಮಾಡಿ, ರ್ಯಾಲಿ ಹೋಗಿ ಜಿಲ್ಲೆಯ ಮುಖ್ಯಸ್ಥರಾದ ಡೆಪ್ಯುಟಿ ಕಮಿಷನರ್‌ಗೆ ಮನವಿ ಕೊಡಲಿಕ್ಕೆ ಇದ್ದಾರೆ. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನಾಗುತ್ತದೆ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಏನೇ ಆಗಲೀ ಮಾಡತಕ್ಕ ತೀರ್ಮಾನವನ್ನು ಆದಷ್ಟು ಬೇಗ ಮಾಡಿ ಈ ೨೦ ಸಾವಿರ ಕುಟುಂಬದವರಿಗೆ ಅನ್ಯಾಯ ಆಗುವುದನ್ನು ತಪ್ಪಿಸಿ ನಮ್ಮ ಜಿಲ್ಲೆಯ ಕ್ಷೋಭೆಯನ್ನು ತಪ್ಪಿಸಬೇಕು. ಒಂದು ವೇಳೆ ನೀವು ಪಾನನಿರೋಧ ಮಾಡುವುದಾದರೆ ಎಲ್ಲಾ ಪಾನವನ್ನು ನಿರೋಧ ಮಾಡಬೇಕಾಗಿತ್ತು. ಆದಕ್ಕೆ ನಾನು ನೂರಕ್ಕೆ ನೂರು ಭಾಗ ಒಪ್ಪಿಗೆ ಕೊಡತಕ್ಕವನು. ೧೯೭೭ರಲ್ಲಿ ಶಾಸಕನಾಗಿದ್ದಾಗ ಪಾನನಿರೋಧ ಮಾಡಬೇಕೆಂದು ನಾನು ಒಂದೂವರೆ ಗಂಟೆ ಮಾತನಾಡಿದ್ದೇನೆ. ಇವತ್ತು ಸಂಪೂರ್ಣವಾದ ಪಾನನಿರೋಧ ಇಲ್ಲ. ಇದು ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಬಹಳ ಅನ್ಯಾಯವಾಗಿದೆ. ಇವತ್ತು ಇಪ್ಪತ್ತು ಸಾವಿರ ಮೂರ್ತೆದಾರರು ಬೀದಿ ಪಾಲು ಆಗುತ್ತಾರೆ. ಆದ್ದರಿಂದ ಇದನ್ನು ತಪ್ಪಿಸಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ವಿಜಯಕುಮಾರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಈ ಕೇಂದಿಯನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲಿ ಪುರಗಳಿಂದ ತೆಗೆಯುವಂಥಾದ್ದು ಇತರ ಕಡೆ ಮಾಡುವಂಥಾದ್ದಲ್ಲ. ಇದನ್ನು "ಕಳಿ" ಎಂದು ಹೇಳುತ್ತಾರೆ. ಈ ಕಳಿಯ ಬಗ್ಗೆ ಸಿಎಫ್‌ಟಿಆರ್‌ಐ ನವರು ಕೂಡಾ ರಿಸರ್ಚ್ ಮಾಡಿ ಇದು ಒಂದು ಆಹಾರ, ಔಷಧಿ ಎಂದು ತೀರ್ಮಾನ ಕೊಟ್ಟಿದ್ದಾರೆ. ಇಂದಂ ಗರ್ಭಿಣಿಯರಿಗೆ, ಡಯಾಬಿಟಿಸ್ ಇರುವವರಿಗೆ ಆಹಾರ, ಔಷಧಿ ಎಂದು ತೀರ್ಮಾನ ಕೊಟ್ಟಿದ್ದಾರೆ. ಆದ್ದರಿಂದ, ದಕ್ಷಿಣ ಕನ್ನಡ ಜಿಲ್ಲೆಯ

ಎಲ್ಲಾ ೧೫ ಶಾಸಕರು, ಇಬ್ಬರು ಲೋಕಸಭಾ ಸದಸ್ಯರು ಇದಕ್ಕೆ ವಿನಾಯಿತಿ ಕೊಡಬೇಕೆಂದು ಹಲವಾರು ಬಾರಿ ಮನವಿ ಮಾಡಿದ್ದೇವೆ. ಆದ್ದರಿಂದ ಈ ಜನರಿಗೆ ಯಾವುದು ಬೇಡವೋ ಅದನ್ನು ಸರ್ಕಾರ ಹೇರುವುದು ಬೇಡ ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಈ ಬಗ್ಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಈಗ ಈ ಗಮನ ಸೆಳೆಯುವ ಸೂಚನೆಗೆ ೧೫ ಜನರು ತಮ್ಮ ಹೆಸರನ್ನು ಕೊಟ್ಟಿದ್ದಾರೆ. ಸಾಮಾನ್ಯವಾಗಿ ಒಂದು ಗಮನ ಸೆಳೆಯುವ ಸೂಚನೆಯಲ್ಲಿ ೫ ಜನಕ್ಕಿಂತ ಹೆಚ್ಚು ಸದಸ್ಯರಿಗೆ ಅವಕಾಶ ಕೊಡುವುದಿಲ್ಲ. ಆದರೂ ಒಬ್ಬೊಬ್ಬರು ಒಂದೆರಡು ನಿಮಿಷದಲ್ಲಿ ಮಾತನಾಡುವುದಾದರೆ ಎಲ್ಲರಿಗೂ ಅವಕಾಶವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಶೇಂದಿಯನ್ನು ನಿಷೇಧಿಸತಕ್ಕ ಸರ್ಕಾರದ ತೀರ್ಮಾನ ಒಳ್ಳೆಯದಿದೆ. ಆದರೆ ಈ ತೀರ್ಮಾನಕ್ಕೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಹೊರತು ಪಡಿಸಬೇಕೆಂದು ನನ್ನ ಒತ್ತಾಯ. ಇದಕ್ಕೆ ಕಾರಣ ಏನೆಂದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರತಕ್ಕ ವಾಸ್ತವಿಕ ಪರಿಸ್ಥಿತಿಗೂ ಹಾಗೂ ಬೇರೆ ಜಿಲ್ಲೆಗಳಲ್ಲಿರುವ ಪರಿಸ್ಥಿತಿಗೂ ವ್ಯತ್ಯಾಸ ಇದೆ. ಬೇರೆ ಜಿಲ್ಲೆಗಳಲ್ಲಿ ವಾಸ್ತವಿಕವಾಗಿ ಈಚಲು, ಬಗನಿ, ತಾಳೆ ಮರಗಳಿಂದ ಶೇಂದಿ ತೆಗೆಯಂತಿದ್ದರು. ಆದರೆ ಅಲ್ಲಿ ಈಗ ಸಾಕಷ್ಟು ಪ್ರಮಾಣದಲ್ಲಿ ಆ ಮರಗಳು ಸಿಗದೇ ಇರುವುದರಿಂದ ಕಲಬೆರಕೆ ಶೇಂದಿ ಮಾರಾಟ ಆಗುತ್ತಿದ್ದುದು ನಮಗೆ ಗೊತ್ತಿತ್ತು. ಆದರೆ ಎಷ್ಟು ಪ್ರಮಾಣದಲ್ಲಿ ಶೇಂದಿ ಬೇಕೋ ಅದು ಸಿಗುತ್ತಿಲ್ಲ. ಅಧ್ಯಕ್ಷರೇ, ಈ ಶೇಂದಿ ಇಳಿಸತಕ್ಕಂಥ ಕೆಲಸವನ್ನೆ ಮಾಡಿಕೊಂಡು ಬಂದಿರತಕ್ಕ ಒಂದು ವರ್ಗ ರಾಜ್ಯದ ಎಲ್ಲಾ ಭಾಗದಲ್ಲೂ ಇದೆ, ಅವರೆಲ್ಲಾ ಬಡವರು. ಇವತ್ತು ತಾವು ಗುತ್ತೇದಾರರನ್ನು ನೋಡುವುದಕ್ಕೆ ಹೋಗಬೇಡಿ. ಇವತ್ತು ಶೇಂದಿ ಗುತ್ತೇದಾರರು ಹಾಗೂ ಶೇಂದಿ ಇಳಿಸುವವರು ಎಲ್ಲಾ ಒಂದೇ ವರ್ಗಕ್ಕೆ ಸೇರಿರುವುದರಿಂದ ಶೇಂದಿ ಉದ್ಯೋಗದಲ್ಲಿ ತೊಡಗಿರುವವರೆಲ್ಲಾ ಶ್ರೀಮಂತರು ಎನ್ನುವ ಅಭಿಪ್ರಾಯ ಇದೆ. ಆ ರೀತಿ ಭಾವನೆ ಸರಿಯಲ್ಲ. ಇವತ್ತು ಗುತ್ತೇದಾರರು ಶ್ರೀಮಂತರಿದ್ದಾರೆ. ಅವರು ಹಣ ಮಾಡಿಕೊಂಡಿದ್ದಾರೆ. ಅವರು ಯಾವುದೋ ಒಂದು ರೀತಿಯಲ್ಲಿ ಹೋಗುತ್ತಾರೆ.

ಶ್ರೀ ಕೆ. ಶಿವಮೂರ್ತಿ.—ಕಾಗೋಡು ತಿಮ್ಮಪ್ಪನವರೆ, ಬೇರೆಯವರು ಹಣ ಮಾಡಿಲ್ಲವೇ ?

ಶ್ರೀ ಕಾಗೋಡು ತಿಮ್ಮಪ್ಪ.—ಬೇರೆಯವರೂ ಮಾಡಿದ್ದಾರೆ.

ನಿನ್ನೆ ಚಿತ್ರದುರ್ಗ ಜಿಲ್ಲೆಯಿಂದ ಶೇಂದಿಯನ್ನು ಇಳಿಸತಕ್ಕ ಜನರು ಬಂದಿದ್ದರು. ಅವರು ನೀವು ಶೇಂದಿ ಮಾರಾಟವನ್ನು ನಿಷೇಧ ಮಾಡಿ ಆದಕ್ಕೆ ನಾವು ಬೇಡ ಅನ್ನುವುದಿಲ್ಲ. ಆದರೆ ನಮಗೆ ಏನಾದರೂ ಬೇರೆ ಪುನರ್‌ವ್ಯವಸ್ಥೆ ಮಾಡಿ ಎಲ್ಲಾದರೂ ಜಮೀನು ಇದ್ದರೆ ಕೊಡಿ, ಅಥವಾ ಇನ್ನೇನಾದರೂ ಸಹಾಯ ಮಾಡಿಯೆಂದು ಕೇಳಿದರು. ಅವರನ್ನು ಬೀದಿಗೆ ಬಿಡಬೇಕಾದ ಅಗತ್ಯವಿಲ್ಲ ದಕ್ಷಿಣ ಕನ್ನಡ ಜಿಲ್ಲೆ ಒಂದೇ ಅಲ್ಲ, ಬೇರೆ ಬೇರೆ ಜಿಲ್ಲೆಗಳಲ್ಲಿಯೂ ಸಹ ಶೇಂದಿ ಇಳಿಸತಕ್ಕವರು ಇದ್ದಾರೆ. ಶೇಂದಿ ಇಳಿಸಿದ್ದನ್ನು ತಂದು ಅಂಗಡಿಗೆ ಹಾಕುವವರು ಇದ್ದಾರೆ. ಅವರನ್ನು ಗುರುತಿಸಿ ಒಂದು ಪಟ್ಟಿಮಾಡಿ ಆಯಾ ಜಿಲ್ಲೆಯಲ್ಲಿ ಭೂಮಿ ಸಿಕ್ಕಿದರೆ ಭೂಮಿ ಕೊಡಿ, ಅಥವಾ ಅಂಗಡಿ ಮೈರೆ ಹಾಕಿಕೊಳ್ಳುವುದಕ್ಕೆ ಅನುಕೂಲತೆ ಇದ್ದರೆ ದಯವಿಟ್ಟು ಅನುಕೂಲ ಮಾಡಿಕೊಡಿ. ಈಗ ಸಾರಾಯಿ ಅಂಗಡಿಗಳನ್ನು, ವೈನ್‌ಶಾಪ್‌ಗಳನ್ನು ಕೊಡುವಂಥ ಸನ್ನಿವೇಶ ಬಂದರೆ ಅಂಥವರಿಗೆ ಆದ್ಯತೆ ಕೊಟ್ಟು ನಿಯಮಗಳನ್ನು ಬದಲಾವಣೆ ಮಾಡಿ ಇವರಿಗೆ ಕೊಡಿ. ಆ ಕೆಲಸ ಮಾಡಿಕೊಡುವುದು ಒಂದು, ಎರಡನೆಯದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಶೇಂದಿ ಇಳಿಸತಕ್ಕ ಜನರು ಬಹಳ ಬಡವರು ಇದ್ದಾರೆ. ಮಾನ್ಯ ಸದಸ್ಯರಾದ ಡಿಸೌಜರವರು ಹೇಳಿದ್ದು ನಿಜ. ಆ ಜನರು ಕೆಲಸ ಮಾಡಿ ಮನೆಗೆ ಬಂದು ಎರಡು ಬಾಟಲ್ ಶೇಂದಿ ಎರಡು ಒಣಗಿದ ಬಂಗಡೆ ಮೀನು ಇಟ್ಟುಕೊಂಡರೆ ಅವರಿಗೆ ಬೇರೆ ಯಾವ ಆಹಾರವೂ ಬೇಡ. ಅಪ್ಪರಿಂದಲೇ ತೃಪ್ತಿಪಡತಕ್ಕ ಜನರು ಸಾಕಷ್ಟು ಪ್ರಮಾಣದಲ್ಲಿ ಅಲ್ಲಿದ್ದಾರೆ. ಸರ್ಕಾರ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯನ್ನು ನೋಡತಕ್ಕ ಒಂದು ಕೆಲಸ ಮಾಡಬೇಕು. ಏಕೆಂದರೆ, ಈ ಕಸುಬನ್ನೇ ಕಳೆದುಕೊಂಡರೆ ಅವರು ಏನು ಮಾಡಬೇಕೆನ್ನುವುದು ಪ್ರಶ್ನೆ. ಬೇರೆ ಕೆಲಸ ಅಥವಾ ಬೇರೆ ಉದ್ಯೋಗ ಸಿಗುವುದಾಗಿದ್ದರೆ ನಾವು ಚಿಂತನೆ ಮಾಡಬೇಕಾದಂಥ ಅಗತ್ಯವಿರಲಿಲ್ಲ. ಆದುದರಿಂದ ಸರ್ಕಾರ ಇವತ್ತು ದಕ್ಷಿಣ ಕನ್ನಡ ಜಿಲ್ಲೆಯನ್ನು ಹೊರತುಪಡಿಸಿ ಅವರನ್ನು ಹರಾಜುದಾರರಿಂದ ಮುಕ್ತಗೊಳಿಸಬೇಕು. ಹಿಂದೆ ಪಾನ ನಿರೋಧ ಜಾರಿಯಲ್ಲಿದ್ದಾಗ ನೀರಾ ಮಾರಾಟ ಮಾಡುವುದಕ್ಕೆ ಅವಕಾಶವಿತ್ತು. ಈ ರೀತಿಯಲ್ಲಿ ನೀರಾ ರೂಪದಲ್ಲಿ ಮಾರಾಟ ಮಾಡುವುದಕ್ಕೆ ಅವಕಾಶವನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಸೀಮಿತಗೊಳಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು.—ಇನ್ನು ಮುಂದೆ ಮಾತನಾಡತಕ್ಕವರು ಬೇರೆಯವರು ಹೇಳಿದ್ದನ್ನು ಬಿಟ್ಟು ಏನಾದರೂ ಇದ್ದರೆ ಹೇಳಿ.

ಶ್ರೀ ಎ. ರಂಕ್ಯಯ್ಯ ಪೂಜಾರಿ.—ಮಾನ್ಯ ಉಪಾಧ್ಯಕ್ಷಿಣಿಯವರೆ. ನಮ್ಮ ಸರ್ಕಾರದ ಈ ತೀರ್ಮಾನದಿಂದ ನಮ್ಮ ಜಿಲ್ಲೆಯಲ್ಲಿನ ೧೦ ಸಾವಿರ ಮೂರ್ತೆದಾರ ಕುಟುಂಬದವರು ತುಂಬಾ ಗೊಂದಲಕ್ಕೆ ಈಡಾಗಿದ್ದಾರೆ. ಅವರ ಪರವಾಗಿ ಸಭೆ, ಮೆರವಣಿಗೆ, ಧರಣಿ ನಡೆಯುತ್ತಿವೆ. ಈ ಪರಿಸ್ಥಿತಿ ಇನ್ನೂ ಗಂಭೀರವಾಗಲಿಕ್ಕೆ ಸಾಧ್ಯವಿದೆ. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ನೀವು ಸೇಂದಿ ಮಾರಾಟ ನಿಷೇಧ ಮಾಡಿದ್ದೀರಿ. ಸೇಂದಿಯನ್ನು ಪುನಃ ಮಾರಾಟ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಾವು ಹೇಳಿದರೆ ಅದು ನಿಮಗೆ ತಮಾಷೆಯಾಗಿ ಕಾಣಬಹುದು. ಇದರ ಬಗ್ಗೆ ಬಹಳ ಗಂಭೀರವಾಗಿ ನಾವು ಆಲೋಚನೆ ಮಾಡಬೇಕಾಗಿದೆ. ಏಕೆಂದರೆ, ಇವತ್ತು ಸಾಮಾನ್ಯವಾಗಿ ಕುಡಿಯುತಕ್ಕವರಂ ಹರಿಜನರು ಮತ್ತು ಬಡವರು. ಇವತ್ತು ಸೇಂದಿ ಮಾರಾಟ ನಿಷೇಧವಾದರೆ, ಶರಾಬು ಉಂಟು ಅದನ್ನು ಕುಡಿಯಬಹುದು ಎನ್ನುತ್ತಾರೆ. ಶರಾಬಿಗೆ ಸೇಂದಿಗಿಂತ ಜಾಸ್ತಿ ದರವನ್ನು ಕೊಡಬೇಕಾಗುತ್ತದೆ. ಅಲ್ಲದೆ ಅದರಿಂದ ಆರೋಗ್ಯ ಕೂಡ ಹಾಳಾಗುತ್ತದೆ. ಆದರಿಂದ ಬಡಜನರಿಗೆ ತೊಂದರೆಯಾಗುವುದು ಸಾಮಾನ್ಯವಾಗಿದೆ. ಆದ್ದರಿಂದ ನಮ್ಮ ಜಿಲ್ಲೆಯಲ್ಲಿ ಸೇಂದಿ ಕುಡಿತ ಆರೋಗ್ಯಕ್ಕೆ ಒಳ್ಳೆಯದೆಂದು ಜನ ಹೇಳುತ್ತಿದ್ದಾರೆ. ನಾನಂ ಹೇಳುವುದೇನೆಂದರೆ, ಏನಾದರೂ ಒಂದು ತೀರ್ಮಾನ ತೆಗೆದುಕೊಳ್ಳುವುದಾದರೆ ಅದನ್ನು ಅವಸರವಾಗಿ ತೆಗೆದುಕೊಳ್ಳುವುದು ಅಪಶ್ಯಕವಿಲ್ಲ. ಏಕೆಂದರೆ, ಯಾವುದೇ ಅವಸರದ ತೀರ್ಮಾನವನ್ನು ತೆಗೆದುಕೊಂಡರೆ ಅದು ಪುನಃ ಗೊಂದಲವುಂಟಾಗುತ್ತದೆ. ಆ ದೃಷ್ಟಿಯಿಂದ ಆಮೂಲಾಗ್ರವಾಗಿ ಅದರ ಬಗ್ಗೆ ಚರ್ಚೆಮಾಡಿ ಯಾವುದೇ ಪರಿಸ್ಥಿತಿಯಲ್ಲೂ ಕೂಡ ಮೂರ್ತೆದಾರರಿಗೆ, ಕುಡಿಯುವರಿಗೆ ತೊಂದರೆಯಾಗದ ರೀತಿಯಲ್ಲಿ ತೀರ್ಮಾನ ಮಾಡಬೇಕು. ಆ ರೀತಿಯ ಒಂದು ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಬರುವ ಜುಲೈ ಒಂದರ ನಂತರ ಸೇಂದಿ ಮಾರಾಟಕ್ಕೆ ನಿರ್ಬಂಧ ಬರುತ್ತದೆ. ನಮ್ಮ ಜಿಲ್ಲೆಗೆ ಒಂದು ವರ್ಷದ ಮಟ್ಟಿಗೆ ಒಂದು ರಿಯಾಯಿತಿಯನ್ನು ಮಾಡಿ. ಈ ಒಂದು ವರ್ಷದ ಅವಧಿಯಲ್ಲಿ ಸಂಪೂರ್ಣವಾಗಿ ಪರೀಕ್ಷೆ ಮಾಡಿಯಾವ ರೀತಿ ಮುಂದುವರಿಸಿಕೊಂಡು ಹೋಗುವುದು ಎನ್ನುವುದರ ಬಗ್ಗೆ ತೀರ್ಮಾನ ಮಾಡುವ ರೀತಿಯಲ್ಲಿ ಸರ್ಕಾರ ಆಲೋಚಿಸಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಕೆ. ಗಂಗಾಧರಗೌಡ.—ಮಾನ್ಯ ಉಪಾಧ್ಯಕ್ಷಿಣಿಯವರೆ, ನನ್ನ ಸ್ನೇಹಿತರು ಸೇಂದಿ ಮಾರಾಟವನ್ನು ನಮ್ಮ ಜಿಲ್ಲೆಯಲ್ಲಿ ಮುಂದುವರಿಸಿಕೊಂಡು ಹೋಗಬೇಕೆಂದು ಕೇಳಿಕೊಂಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರ್ತೆದಾರರು ಇವತ್ತು ಬೀದಿ ಪಾಲಾಗಿದ್ದಾರೆ. ಅವರು ಕಳ್ಳು ತೆಗೆಯುವ ಪ್ರಮಸ್ಥೆಯನ್ನು ಸರ್ಕಾರ ಮುಂದುವರಿಸಬೇಕು. ಇದು ಆಹಾರದ ಒಂದು ಭಾಗವಾಗಿರುವುದರಿಂದ, ಕಳ್ಳು ಕುಡಿಯುವುದರಿಂದ ಏನೂ ತೊಂದರೆಯಾಗುವುದಿಲ್ಲವೆನ್ನುವ ಅಭಿಪ್ರಾಯವನ್ನು ನಾವು ಇಲ್ಲಿ ಕೇಳಿದ್ದೇವೆ. ಆದ್ದರಿಂದ ಸರ್ಕಾರ ಮೂರ್ತೆದಾರರಿಗೆ ಕೆಲಸ ಮಾಡುವಂತಹ ಒಂದು ಅವಕಾಶವನ್ನು ಕೊಟ್ಟು ಅವರ ಕಾಲಕಸಬನ್ನು ಮುಂದುವರಿಸಿಕೊಂಡು ಹೋಗಲಿಕ್ಕೆ ಸಹಾಯ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

† ಶ್ರೀ ರಮಾನಾಥ ರೈ (ಬಂಟ್ವಾಳ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಸೇಂದಿ ನಿಷೇಧ ಮಾಡುವಂಥ ತೀರ್ಮಾನವನ್ನು ಕರ್ನಾಟಕ ರಾಜ್ಯ ಸರ್ಕಾರ ಕೈಗೊಂಡಿರುವುದನ್ನು ರಾಜ್ಯದ ಕೆಲವು ಭಾಗಗಳಲ್ಲಿ ಅನೇಕ ಜನ ಸ್ವಾಗತ ಮಾಡಿರಬಹುದು. ಆದರೆ ನಮ್ಮ ಜಿಲ್ಲೆಯ ವಿಚಾರವಾಗಿ ನಾವು ಇದನ್ನು ವಿಚಾರ ಮಾಡಿದಾಗ ನಮ್ಮ ಜಿಲ್ಲೆಯಲ್ಲಿ ಯಾವುದೇ ಒಬ್ಬ ಜನಪ್ರತಿನಿಧಿ, ಯಾವುದೇ ಒಂದು ಪಕ್ಷ, ಯಾವುದೇ ಒಂದು ಜನಾಂಗ, ಯಾವುದೇ ಒಂದು ವರ್ಗದ ಜನರು ಈ ಒಂದು ಕಾರ್ಯಕ್ರಮ ಸರಿಯಾದುದು, ಹೌದು ಎನ್ನುವ ಮಾತನ್ನು ಹೇಳಿಲ್ಲ. ಏಕೆಂದರೆ ಸೇಂದಿ ನಮ್ಮ ಜಿಲ್ಲೆಯಲ್ಲಿ ಕಲಬೆರಕೆಯಾಗಿ ಮಾರಾಟವಾಗುತ್ತಿಲ್ಲ ಶುದ್ಧ ಸೇಂದಿಯನ್ನು ಜನ ಕುಡಿಯುತ್ತಿದ್ದಾರೆ. ಸರ್ಕಾರದ ಈ ತೀರ್ಮಾನದಿಂದ ಮೂರ್ತೆದಾರರಿಗೆ ಅವರ ಕಸುಬಿಗೆ ಬಹಳಷ್ಟು ರೀತಿಯ ಅನ್ಯಾಯವಾಗಿದೆ. ಜೊತೆಗೆ ಕುಡಿಯುಕ್ಕಂಥ ಜನರು ಕೂಡ ಇದರಿಂದ ತೊಂದರೆಗೆ ಒಳಗಾಗಿದ್ದಾರೆ ಎಂಬ ಮಾತನ್ನು ನಾವು ಒಪ್ಪಿಕೊಳ್ಳಬೇಕಾಗಿದೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಇದು ಬಹಳಷ್ಟು ಸೂಕ್ಷ್ಮವಾದ ವಿಚಾರ. ನಾವು ಬಹಳ ಕಡೆ, ನಮ್ಮ ದೇಶದ ಅನೇಕ ಭಾಗಗಳಲ್ಲಿ ನಡೆದ ವಿಚಾರಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇವತ್ತು ಆಂಧ್ರಪ್ರದೇಶದಲ್ಲಿ ತೆಲಂಗಾಣ ಚಳುವಳಿ ಯಾವ ರೀತಿ ಪ್ರಾರಂಭವಾಯಿತ ಅಥವಾ ಅಸ್ಸಾಮ್‌ನಲ್ಲಿ ಅಸ್ಸಾಂ ಚಳುವಳಿ ಯಾವ ರೀತಿ ಪ್ರಾರಂಭ ಆಯಿತು ಬೋರ್ಡೋ ಎಜು ಕೇಶನ್ ಗೂರ್ಖಾ ಚಳುವಳಿ ಯಾವ ರೀತಿ ಪ್ರಾರಂಭ ಆಯಿತು ಎಂಬುದರ ಸೂಕ್ಷ್ಮವಾದ ಹಿನ್ನೆಲೆ ಏನು ಎಂಬುದನ್ನು ಕರ್ನಾಟಕ ರಾಜ್ಯಸರ್ಕಾರ ಗಮನಿಸಬೇಕಾಗಿದೆ. ಇವತ್ತು ನಮ್ಮ ಜಿಲ್ಲೆಯಲ್ಲಿ ಸೇಂದಿ ಇಳಿಸುತಕ್ಕಂಥ ಜನರ ಭಾವನೆಗಳಿಗೆ ಕೆಡುಕನ್ನು ಉಂಟುಮಾಡಿ, ಇದನ್ನು ಆಹಾರವಾಗಿ ಉಪಯೋಗಿಸತಕ್ಕಂಥ

ಜನರ ವಂನಸ್ಸಿಗೆ ನೋವು ಉಂಟುಮಾಡತಕ್ಕಂಥ, ಸರ್ಕಾರಕ್ಕೆ ನಷ್ಟ ಉಂಟುಮಾಡಿಕೊಂಡು ಮಾಡತಕ್ಕ ಈ ಕಾರ್ಯಕ್ರಮ ಏನಿದೆ ಇದಕ್ಕೆ ಚಳುವಳಿ ಪ್ರಾರಂಭವಾಗಿದೆ. ಈ ಚಳುವಳಿ ಎಲ್ಲಿಗೆ ನಿಲ್ಲುತ್ತದೆ ಎನ್ನತಕ್ಕಂಥ ಅಭಿಪ್ರಾಯ ನಿಮಗೆ ತಪ್ಪು ಕಲ್ಪನೆ ಇರಬಹುದು. ಇದರ ಹಿನ್ನೆಲೆಯಲ್ಲಿ ಬಹಳ ಗಂಭೀರ ಪರಿಸ್ಥಿತಿಗೆ ಹೋಗಬಹುದು. ಇದನ್ನು ಯಾವುದೆ ಜನಪ್ರತಿನಿಧಿ ಸ್ವಾಗತ ಮಾಡಲಿಕ್ಕೆ ಸಿದ್ಧರಿಲ್ಲ. ಲೋಕಸಭಾಸದಸ್ಯರು, ಶಾಸಕರು, ಮಂಡಲ ಪ್ರಧಾನರುಗಳು ಜಿಲ್ಲಾ ಪರಿಷತ್ ಸದಸ್ಯರು ಮಾತ್ರ ವಲ್ಲ ಯಾವುದೇ ರಾಜಕೀಯ ಪಕ್ಷೆ, ಕಾಂಗ್ರೆಸ್ ಪಕ್ಷವಾಗಲಿ, ಜನತಾದಳ ಪಕ್ಷವಾಗಲಿ. ಬಿ.ಜೆ.ಪಿ. ಯಾಗಲಿ, ಕಮ್ಯುನಿಸ್ಟ್, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವಾಗಲೀ, ಅಥವಾ ಪಕ್ಷೇತರರಾಗಲೀ ಎಲ್ಲರೂ ಇದನ್ನು ವಿರೋಧಿಸುತ್ತಾರೆ ಅದಕ್ಕಾಗಿ ಸರ್ಕಾರ ಇದನ್ನು ಪುನರ್‌ವಿಮರ್ಶೆ ಮಾಡಬೇಕು, ಇಲ್ಲದಿದ್ದರೆ ಇದರ ಪರಿಣಾಮ ನೆಟ್ಟಗಾಗುವುದಿಲ್ಲ ಎನ್ನತಕ್ಕಂಥ ಗಂಭೀರವಾದಂಥ ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಡುತ್ತೇನೆ ಎನ್ನುವ ಮಾತನ್ನು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

†ಶ್ರೀ ಎಂ. ರಾಜಶೇಖರಮೂರ್ತಿ (ಹಣಕಾಸು ಸಚಿವರು).—ಸನ್ಮಾನ್ಯ ಅಧ್ಯಕ್ಷೆಣಿಯವರೇ, ಈ ಗವರ್ನಮೆಂಟಿನ ಸೂಚನೆ ಏನಿದೆ, ಇದು ಚರ್ಚೆಗೇ ಪ್ರಾರಂಭ ಆಗಿತ್ತು. ಬೇಡಿಕೆಮೇಲೆ ಚರ್ಚೆ ಆದಹಾಗೆ ಆಯಿತು ವಿಷಯ ಬಹಳ ಪ್ರಾಮುಖ್ಯವಾದುದರಿಂದ ಮಾನ್ಯ ಸದಸ್ಯರು ದೀರ್ಘವಾಗಿ ಚರ್ಚೆ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದು ಉತ್ತಮವಾದ, ತ್ವರಿತವಾದ ಕಾರ್ಯಕ್ರಮ ಎಂದು ಹೇಳಿ ಸೇಂದಿ ಮಾರಾಟ ನಿಷೇಧ ಮಾಡಿದ್ದನ್ನು ಇಡೀ ರಾಷ್ಟ್ರದಲ್ಲಿ ಜನ ಸ್ವಾಗತ ಮಾಡಿದ್ದಾರೆ. ಆದರೆ ಇದರಿಂದ ಕೆಲವು ಸಮಸ್ಯೆಗಳು ಉದ್ಭವಿಸಿರುವುದರಿಂದ ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಇದನ್ನೇ ಉಪ ಕುಲ ಕಸುಬಾಗಿ ಮಾಡಿಕೊಂಡಿರತಕ್ಕಂಥ ಮೂರ್ತೆದಾರರು ಏನಿದ್ದಾರೆ ಅವರಿಗೆ ತೊಂದರೆಯಾಗಿದೆ, ಅವರು ನಿರುದ್ಯೋಗಿಗಳಾಗುತ್ತಾರೆ ಎಂದು ಹೇಳಿ ಇದರ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ದಕ್ಷಿಣ ಜಿಲ್ಲೆಗೆ ಇದನ್ನು ಹೊರತಾಗಿ ಬೇಕಿಯದ್ದಕ್ಕೆ ಮಾತ್ರ ಅನ್ವಯಿಸಬೇಕು. ಇನ್ನು ಕೆಲವರು ಸೊಸೈಟಿ ಮುಖಾಂತರ ಮಾರಾಟ ಮಾಡುವುದಕ್ಕೆ ಅವಕಾಶ ಕೊಡಿ ಎಂದು ನಾನಾ ರೀತಿಯ ಸಲಹೆಗಳನ್ನು ಕೊಟ್ಟಿದ್ದಾರೆ. ಒಂದೇ ಒಂದು ಅವರ ಮನಸ್ಸಿನಲ್ಲಿ ಇರುವುದು ಏನೆಂದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನು ಮೂರ್ತೆದಾರರು ಇದ್ದಾರೆ, ಅವರು ನಿರುದ್ಯೋಗಿಗಳು ಆಗಬಾರದು, ಅವರು ನಿರುದ್ಯೋಗಿಗಳು ಆಗದೇ ಇರುವಹಾಗೆ ಏನೇನು ಕಾರ್ಯಕ್ರಮಗಳನ್ನು ರೂಪಿಸಬೇಕೋ ಅವುಗಳನ್ನು ರೂಪಿಸಬೇಕೆಂಬ ಸರ್ಕಾರ ಆಲೋಚನೆ ಮಾಡುತ್ತಿದೆ. ಈ ವಿಚಾರ ಮಂತ್ರಿಮಂಡಲದಲ್ಲೂ ಕೂಡ ಚರ್ಚೆಗೆ ಬಂದಿತ್ತು. ಆದು ಬಂದಮೇಲೆ ವಿಚಾರ ಬಹಳ ಪ್ರಾಮುಖ್ಯವಾದುದು ಎಂದು ಹೇಳಿ ಒಂದು ಉಪಸಮಿತಿಯನ್ನು ರಚನೆ ಮಾಡಿದ್ದೇವೆ. ಈ ಉಪಸಮಿತಿ ಎರಡು ಸಿಟ್ಟಿಂಗ್‌ಗಳನ್ನು ಮಾಡಿದೆ. ಮತ್ತೆ ಮಂಗಳವಾರ ದಿವಸ ಈ ಉಪಸಮಿತಿ ಸೇರಲಿದೆ. ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ, ಆ ಸಲಹೆಗಳನ್ನು ನಾನು ಉಪಸಮಿತಿಯ ಮುಂದೆ ಇಡುತ್ತೇನೆ. ಮತ್ತು ಉಪಸಮಿತಿಯ ರಿಪೋರ್ಟನ್ನು ಶೀಘ್ರದಲ್ಲಿಯೇ ಕ್ಯಾಬಿನೆಟ್ ಮುಂದೆ ತೆಗೆದುಕೊಂಡು ಹೋಗುತ್ತೇನೆ. ಇದರ ಬಗ್ಗೆ ಕ್ಯಾಬಿನೆಟ್ ಒಂದು ಆಖೈರು ತೀರ್ಮಾನವನ್ನು ಶೀಘ್ರದಲ್ಲೇ ತೆಗೆದುಕೊಳ್ಳುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಉಪಾಧ್ಯಕ್ಷರೆ, ನಾನು ಕೂಡ ಇದೆ ವಿಚಾರದಲ್ಲಿ ಬೇರೆ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿಕೊಟ್ಟಿದ್ದೆ. ಮತ್ತೆ ಇದೇ ವಿಷಯಕ್ಕಾಗಿ ಸದನದ ಸಮಯವನ್ನು ವ್ಯಯ ಮಾಡುವುದು ಬೇಡ. ನಿನ್ನೆ ನಾನು ಕಾರ್ಮಿಕ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡುವಾಗ ಈ ವಿಷಯವನ್ನೂ ಪ್ರಸ್ತಾಪ ಮಾಡಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರತಕ್ಕ ಮೂರ್ತೆದಾರರ ಜೀವನದ ಪ್ರಶ್ನೆ ಇದು. ಅಲ್ಲಿ ೧೫–೨೦ ಸಾವಿರ ಜನ ಇರಬಹುದು. ಇದಲ್ಲದೆ ಇಡೀ ರಾಜ್ಯದಲ್ಲಿ ಸುಮಾರು ೫೦ ಸಾವಿರ ಜನ ಇದರಿಂದ ಜೀವನ ಮಾಡಿಕೊಂಡಿದ್ದಾರೆ. ಇವರನ್ನೂ ಪರಿಗಣನೆಗೆ ತೆಗೆದುಕೊಳ್ಳಬೇಕು. ತಾವು ಈಗಾಗಲೇ ಮಾಡಿರತಕ್ಕ ಉಪಸಮಿತಿಯಲ್ಲಿ, ಈ ಪ್ರಶ್ನೆಯನ್ನೂ ತಂದು ಒತ್ತಾಯ ಮಾಡಬೇಕೆಂದು. ತಮ್ಮನ್ನು ಒತ್ತಾಯಿಸುತ್ತೇನೆ.

ನಿಯಮ ೫೩ಳಿರ ವೇರೆಗೆ

1. ಹಿರೇಹಳ್ಳ ಮಧ್ಯಮ ನಿ...ವರಿ ಯೋಜನೆಗೆ ಹಣ ಒದಗಿಸುವುದು

ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ (ಕೊಪ್ಪಳ).—ಮಾನ್ಯ ಸಭಾಧ್ಯಕ್ಷೆಣಿಯರೇ, ನನ್ನ ಕ್ಷೇತ್ರ ದಲ್ಲಿ ಬರುವ ಹಿರೇಹಳ್ಳ ಮಧ್ಯಮ ನೀರಾವರಿ ಯೋಜನೆ ೧೯೭೭ರಲ್ಲಿ ಜಾರಿಗೆ ಬಂದಿದೆ. ಈ ಯೋಜನೆಯಿಂದ ಹಿಂದುಳಿದ ಕೊಪ್ಪಳ ತಾಲ್ಲೂಕಿನ ಸುಮಾರು ೨೫,೦೦೦ ಎಕರೆ ನೀರಾವರಿ ಸೌಲಭ್ಯ ದೊರಕಲಿದೆ.